# ಆಹಾ ಸುದ್ದಿ!

★ ಸಸಿತೋಟ



ಗ್ರೀಸ್‌ನ ಅಥೆನ್ಸ್‌ನ ಬೀದಿಯಲ್ಲಿ ಕಂಡು ಬಂದ ದೃಶ್ಯವಿದು. ಬೆಂಗಳೂರಿನ ಬೀದಿ ಬದಿಯಲ್ಲೂ ಇಂತಹದ್ದೇ ದೃಶ್ಯಗಳು ಮಾಮೂಲು; ನಾವೂ ಗ್ರೀಕರೂ ಭಾಯಿ ಭಾಯಿ ಎಂದೆಲ್ಲಾ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡುವ ಮುನ್ನ ಒಂದು ಸಣ್ಣ ಅಡಿಟಿಪ್ಪಣಿ– ಇದು ಆರ್ಟಿಸ್ಟ್ ಬುಕ್ ಎಂಬ ಕಲಾ ಪ್ರದರ್ಶನವಂತೆ. ಹಾಗಿದ್ದರೆ ನಮ್ಮಲ್ಲಿಯೂ ಮನೆಮನೆಯಲ್ಲಿ ಕಲಾವಿದರೇ ತುಂಬಿಕೊಂಡಿದ್ದಾರೆ!

ಬಿಹಾರದಲ್ಲಿ ಪರೀಕ್ಷೆಗಳಲ್ಲಿ ಸಾಮೂಹಿಕ ನಕಲು, ಪ್ರಶ್ನೆಪತ್ರಿಕೆಗಳ ಬಹಿರಂಗ ಮಾಮೂಲು. ಇದಕ್ಕೆ ಈಗ ಇನ್ನೊಂದು ಸೇರ್ಪಡೆ, ಪ್ರಶ್ನೆಪತ್ರಿಕೆಗಳನ್ನೇ ಮುದ್ರಿಸಲು ಮರೆತು ಹೋಗಿರುವುದು. ತಿಲ್ಕಾ ಮಾಂಝಿ ಭಾಗಲ್ಪುರ ವಿಶ್ವವಿದ್ಯಾನಿಲಯದಲ್ಲಿ ಹಿಂದಿ ಪರೀಕ್ಷೆಗೆಂದು 94 ಮಂದಿ ವಿದ್ಯಾರ್ಥಿಗಳು ಹಾಜರಾದರಂತೆ. ಆದರೆ ಪ್ರಶ್ನೆಪತ್ರಿಕೆಗಳು ಇನ್ನೂ ಮುದ್ರಣಗೊಂಡಿಲ್ಲ ಎಂಬ ಕಾರಣಕ್ಕೆ ಅವರೆಲ್ಲ ವಾಪಸ್ಸಾದರಂತೆ. ಮೊದಲು ಉತ್ತರ ಬರೆಸಿ ಆಮೇಲೆ ಪ್ರಶ್ನೆಗಳನ್ನು ಮುದ್ರಿಸಿದ್ದರೂ ಆಗುತ್ತಿತ್ತು.

ರಾಜಸ್ತಾನದ ಚಹದಂಗಡಿ ಮಾಲೀಕ ಲೀಲಾ ರಾಂ ಗುಜ್ಜರ್ ತನ್ನ ಆರು ಮಂದಿ ಹೆಣ್ಣುಮಕ್ಕಳಿಗೆ ನೀಡಿದ ವರದಕ್ಷಿಣೆ ಹಣ ಒಟ್ಟು ಒಂದು ಕೋಟಿ ರೂಪಾಯಿಯನ್ನು ಬಹಿರಂಗವಾಗಿ ಎಣಿಸಿ ಈಗ ತೆರಿಗೆ ಇಲಾಖೆ ಕೆಂಗಣ್ಣಿಗೆ ಗುರಿಯಾಗಿದ್ದಾನಂತೆ. ಮದುವೆ ಮುಗಿದು ವಿದಾಯಿ ಸಂಪ್ರದಾಯದ ಸಂದರ್ಭದಲ್ಲಿ ಗ್ರಾಮಸ್ಥರ ಎದುರಿಗೆ ನೋಟುಗಳನ್ನು ಎಣಿಸುತ್ತ ಕೂತಿದ್ದೇ ಎಡವಟ್ಟಾಯ್ತು. ಯಾರೋ ವಿಡಿಯೋ ಮಾಡಿ, ಅದು ವೈರಲ್ ಆಯ್ತಂತೆ. ತೆರಿಗೆ ಇಲಾಖೆ ಜೊತೆಗೆ ಈಗ ಪೊಲೀಸ್ ಇಲಾಖೆಗೂ ಕೆಲಸ, ವರದಕ್ಷಿಣೆ ಪ್ರಕರಣದಿಂದಾಗಿ.





ಟೆನ್ನಿಸ್ ವಲಯದಲ್ಲಿ ರೋಜರ್ ಫೆಡರರ್– ನಾಡಾಲ್ ನಡುವಿನ ಹಣಾಹಣಿ ಭಾರಿ ಕುತೂಹಲಕಾರಿ. ಆದರೆ ಟೆನ್ನಿಸ್‌ಪ್ರಿಯರ ಚಿತ್ತ ಈಗ ಜಪಾನಿನ ಟೆನ್ನಿಸ್‌ಪಟು ರಿಕಿಯತ್ತ ತಿರುಗಿದೆ. ಕೈಯಲ್ಲಿ ರ್‍ಯಾಕೆಟ್ ಇದ್ದರೆ ಸಾಕು, ಏಸ್, ವಾಲಿಗಳಿಗೇನೂ ಕೊರತೆಯಿಲ್ಲವಂತೆ. ಎದುರಾಳಿ ಸೋತು ಬೇಸರ ಮಾಡಿಕೊಂಡರೆ ಬೆನ್ನು ತಟ್ಟಿ ಸಮಾಧಾನವನ್ನೂ ಮಾಡುತ್ತದಂತೆ. ಎಷ್ಟು ಬೇಕಾದರೂ ಜಿಗಿದು ಹೊಡೆತ ಕೊಡುವ ಜಾಣ್ಮೆ ಇರುವ ರಿಕಿ ಎಂಬ ಮಂಗಕ್ಕೆ ಹಗ್ಗದಿಂದ ಕಟ್ಟಿ ಹಾಕುವ ಕುಹಕಿ ಈ ಮಾನವ.



ತೆಲಂಗಾಣದ ಹಲವು ಕಡೆ ಉಷ್ಣಾಂಶ 40– 42 ಡಿಗ್ರಿಗೆ ಏರುತ್ತಿದ್ದು ಸೆಕೆ ತಡೆಯಲಾರದೆ ಫ್ರಿಜ್‌ನಲ್ಲಿ ಮುದುಡಿಕೊಳ್ಳೋಣ ಎನಿಸುತ್ತಿದೆಯಂತೆ. ಅಲ್ಲಿಯ ಸಿರ್ಸಿಲ್ಲಾ ಪಟ್ಟಣದಲ್ಲಿ ಒಬ್ಬರಿಗೆ ಇಂತಹದ್ದೇ ಆಲೋಚನೆ ಬಂದು ಮನೆಯೊಳಗಿನ ಫ್ರಿಜ್ ಒಳಗೆ ಸುರುಳಿ ಸುತ್ತಿಕೊಂಡು ಮಲಗಿದರಂತೆ. ಆದರೆ ಅದು ಕಾಳಿಂಗ ಸರ್ಪ. ಮನೆಯಾತನ ಮಗಳು ತಣ್ಣೀರ ಬಾಟಲ್‌ಗೆಂದು ಫ್ರಿಜ್ ಬಾಗಿಲು ತೆರೆದರೆ, ನನ್ನ ಕೊಠಡಿಯನ್ನು ಶೇರ್ ಮಾಡಲು ನೀನ್ಯಾಕೆ ಬಂದೆ ಎಂದು ಹೆದರಿಸಿತಂತೆ ಈ 'ಹಿಸ್'.

ಬ್ರಿಟನ್ನಿನ ರಾಣಿ ಎಲಿಜಬೆತ್ ಶೂ ಪ್ರೀತಿ ಎಲ್ಲರಿಗೂ ಗೊತ್ತಿರುವಂಥದ್ದೇ. ಈಗ ರಾಣಿ 'ಫೂಟ್ ವುಮನ್' ನೇಮಕಾತಿ ಮಾಡಿಕೊಂಡಿದ್ದಾರಂತೆ. ರಾಣಿ ಹೊಸ ಶೂ ಖರೀದಿಸಿದಾಗ ಅದನ್ನು ಧರಿಸಿ ಬಕಿಂಗ್‌ಹ್ಯಾಂ ಅರಮನೆಯ ಕಾರಿಡಾರ್‌ಗಳಲ್ಲಿ ಓಡಾಡಿ ಆ ಶೂ ಅನ್ನು ಮೃದುವಾಗಿಸುವ ಕೆಲಸ ಈ ಫುಟ್ ವುಮನ್‌ಳದ್ದು. ಹೊಸ ಶೂ ಧರಿಸಿದರೆ ಅದು ಕಚ್ಚಿ ಗುಳ್ಳೆ ಏಳುವ ತಾಪತ್ರಯ 90 ವರ್ಷ ವಯಸ್ಸಿನ ರಾಣಿಗ್ಯಾಕೆ ಎಂದು ಈ ವ್ಯವಸ್ಥೆಯಂತೆ. ರಾಣಿಯಾದರೂ ಹಳೆಯ ಶೂ ಧರಿಸುವ ಹಣೆಬರಹ ಎಲಿಜಬೆತ್ ಅವರದ್ದು.